ಅಂತರ ರಾಜ್ಯ ಸಮಾವೇಶ ಮತ್ತು ದಕ್ಷಿಣ ರಾಜ್ಯಗಳ ಸಿಐಡಿಯ ಪ್ರಧಾನ ಅಧಿಕಾರಿಗಳ ಸಮ್ಮೇಳನವನ್ನು ಏರ್ಪಡಿಸಿದ್ದು ದರೋಡೆಗಳ ಬಗ್ಗೆ ಚರ್ಚಿಸಿ ಅಪರಾಧಿಗಳನ್ನು ಹಿಡಿಯುವ ಬಗ್ಗೆ ಕ್ರಮಕೈಗೊಳ್ಳಲಾಗಿದೆ. ದರೋಡೆ ಕೋರರ ಭಾವಚಿತ್ರಗಳನ್ನು ಮತ್ತು ವಿವರಗಳನ್ನು ಎನ್.ಸಿ.ಆರ್.ಬಿ.ಯಲ್ಲಿ ಶೇಖರಿಸಿ ಅವುಗಳ ಸಹಾಯದಿಂದ ದರೋಡೆಕೋರರನ್ನು ಪತ್ತೆ ಹಚ್ಚಲು ಉಪಯೋಗಿಸಲಾಗುತ್ತಿದೆ.

ಈ ಬಗ್ಗೆ ರಾಜ್ಯದಲ್ಲೂ 3 "ದರೋಡೆ ತಡೆ ದಳ"ಗಳನ್ನು (ಬಳ್ಳಾರಿ, ಗುಲ್ಬರ್ಗಾ ಮತ್ತು ಬೆಂಗಳೂರು) ನಿಯೋಜಿಸಲಾಗಿದ್ದು, ಅವುಗಳು ಕರ್ತವ್ಯ ನಿರ್ವಹಿಸುತ್ತಿವೆ.

ಇನ್ನು ರಾಜ್ಯದಲ್ಲಿ ಹೆಚ್ಚುತ್ತಿರುವ ವರದಕ್ಷಿಣೆ ಸಾವು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತನಿಖೆ: ವಿಚಾರಣೆ ನಡೆಸಲು ಸಿಓಡಿಯಲ್ಲಿ ಒಂದು ಪ್ರತ್ಯೇಕ ವರದಕ್ಷಿಣೆ ನಿಷೇಧ ದಳವನ್ನು ರಚಿಸಲಾಗಿದೆ ವರದಕ್ಷಿಣೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಚಾರಣೆಗಾಗಿ ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು 1990 ಆಗಸ್ಟ್ ತಿಂಗಳಿನಲ್ಲಿ ಸ್ಥಾಪಿಸಲಾಗಿದೆ

ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯ ಕಾಲದಲ್ಲಿ ಉಂಟಾಗುವ ಲೋಪದೋಷಗಳ ಹಾಗೂ ಅಪರಾಧಿಗಳ ಮೇಲೆ ಶೀಘ್ರ ಕ್ರಮ ಕೈಗೊಳ್ಳಲು ಇರುವ ಅಡೆತಡೆಗಳನ್ನು ನಿವಾರಿಸಲು ಸಾಧ್ಯವಾಗುವಂತೆ "ವರದಕ್ಷಿಣೆ ನಿಷೇಧ ಕಾಯಿದೆಗೆ" ತಿದ್ದುಪಡಿ ತರುವ ವಿಷಯ ಸರ್ಕಾರ ಪರಿಶೀಲನೆಯಲ್ಲಿದೆ.

ವರದಕ್ಷಿಣೆ ಸಮಸ್ಯೆಗಳ ನಿವಾರಣೆಗಾಗಿ ಪೊಲೀಸ್ ಇಲಾಖೆಯ ಅಧಿಕಾರಿಗಳು, ಅಭಿಯೋಜಕರುಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಆಗಾಗ ಸಭೆ ಸೇರಿ ಚರ್ಚಿಸಿ, ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೊಸ ಬಸ್ಸು ಮಾರ್ಗ.**

362 - ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ 1991 ರಿಂದ ಇಲ್ಲಿಯವರೆಗೆ ಹೊಸದಾಗಿ ಎಷ್ಟು ಮಾರ್ಗಗಳಲ್ಲಿ ಹೊಸದಾಗಿ ಎಷ್ಟು ಮಾರ್ಗಗಳಲ್ಲಿ ಬಸ್ಸುಗಳ ಸಂಚಾರ ಪ್ರಾರಂಭಿಸಲಾಗಿದೆ ಮತ್ತು ಯಾವ ಯಾವ ಮಾರ್ಗಗಳಲ್ಲಿ ಪ್ರಾರಂಭಿಸಲಾಗಿದೆ;*

*ಆ) ಹೊಸ ಮಾರ್ಗಗಳಿಗೆ ಸಾರ್ವಜನಿಕರಿಂದ ಮನವಿ ಪತ್ರಗಳು ಬಂದಿದೆಯೇ ಬಂದಿದ್ದಲ್ಲಿ ಸರ್ಕಾರ ಆ ಬಗ್ಗೆ ಕ್ರಮ ಕೈಗೊಂಡಿದೆಯೇ;*

*ಇ) ಕನಕಪುರ ತಾಲ್ಲೂಕಿನಲ್ಲಿ ಇನ್ನು ಹೊಸದಾಗಿ ಬಸ್ ಸಂಚಾರ ಪ್ರಾರಂಭಿಸಲು ಎಷ್ಟು ಮಾರ್ಗಗಳ ಸಮೀಕ್ಷೆ (ಸರ್ವೆ) ನಡೆಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 1991 ರಿಂದ ಇಲ್ಲಿಯವರೆಗೆ 37 ಹೊಸ ಮಾರ್ಗಗಳಲ್ಲಿ ಬಸ್ಸುಗಳನ್ನು ಪ್ರಾರಂಭಿಸಿದೆ. ಪ್ರತಿ ವರ್ಷದ ವಿವರಗಳು ಕೆಳಕಂಡಂತಿವೆ.

| | |
|---|---|
| 1991 | 13 ಮಾರ್ಗಗಳು |
| 1992 | 8 ಮಾರ್ಗಗಳು |
| 1993 | 16 ಮಾರ್ಗಗಳು |

ಗ್ರಂಥಾಲಯಂ,
ವಿಧಾನ ಸೌಧ, ಬೆಂಗಳೂರು,

1994 (ಇಲ್ಲಿವರೆಗೆ) ಯಾವುದೂ ಇಲ್ಲ.....ದಿನಾಂಕ.....
ಮಾರ್ಗಗಳ ವಿವರಗಳನ್ನು ಅನುಬಂಧ 'ಎ'ನಲ್ಲಿ ಒದಗಿಸಲಾಗಿದೆ.

ಆ) ಹೌದು.

ರಾಷ್ಟ್ರೀಕರಣಗೊಂಡಿರುವ ಪ್ರದೇಶದಲ್ಲಿ ಅವಶ್ಯಕತೆ ಕಂಡು ಬಂದಿರುವ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಷ್ಟ್ರೀಕೃತ ಮಾರ್ಗಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬಸ್ಸುಗಳನ್ನು ಓಡಿಸುತ್ತಿದೆ. ರಾಷ್ಟ್ರೀಕೃತವಲ್ಲದ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸುವ ಪ್ರಸ್ತಾವನೆ ಇರುವುದಿಲ್ಲ.

ANNEXURE - 'A'

1991.

| | | |
|---|---|---|
| 1. | Kanakapura -Halagurvia, Gerahalli, Venkatarayana doddi. | |
| 2. | Kanakapura | - Heralagallu |
| 3. | Kanakapura | - Mavathur |
| 4. | Kanakapura | - Kabbalu via., Venkatarayanadoddi, Kamasagara. |
| 5. | Kanakapura | - Chunchi Colony |
| 6. | " | Harihara |
| 7. | " | Honnaganahalli |
| 8. | " | Kabbalu via, Gerahalli |
| 9. | " | Narayanapura |
| 10. | " | Arakeri. |
| 11. | " | Kempalanath |
| 12. | " | Gundanagollahalli |
| 13. | " | Guddeveerana - Hosahalli. |

1992

| | | |
|---|---|---|
| 1. | Kanakapura | Haralegavimath |
| 2. | " | Banavasi |
| 3. | " | Agara |
| 4. | " | Salabanni |
| 5. | " | Alakadpeth |
| 6. | " | Keralalasandra |
| 7. | " | Kotekoppa |
| 8. | " | Basavanabinnikup |

1993.

| | | |
|---|---|---|
| 1. | Kanakapura | Sathanur |

| | | | |
|---|---|---|---|
| 2. | " | | Gulagennahalli |
| 3. | " | | T. Bannikuppa |
| 4. | " | | T. Hosahalli |
| 5. | " | | Tungani |
| 6. | " | | Hegganur |
| 7. | " | | Belikothanur |
| 8. | " | | Kothadebahalli |
| 9. | Harohalli | - | Tattekere |
| 10. | Harohalli | - | Gottigehalli |
| 11. | Horohalli | - | Narayanapura |
| 12. | Kanakapura | - | Gorur |
| 13. | Harohalli | - | Gorur |
| 14. | Kanakapura | - | Kodihalli |
| 15. | Kanakapura | - | Sondaghatta. |
| 16. | Kanakapura | - | Aralalasandre. |

**ಕನಕಪುರ ತಾಲ್ಲೂಕು ಮತ್ತು ಚನ್ನಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ ಬಸ್ಸುಗಳ ಸಂಖ್ಯೆ ಕುರಿತು.**

364 - ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಕನಕಪುರ ತಾಲ್ಲೂಕು ಮತ್ತು ಚೆನ್ನಪಟ್ಟಣ ತಾಲ್ಲೂಕು (ವಿರುಪಾಕ್ಷಪುರ ಹೋಬಳಿ ವ್ಯಾಪ್ತಿ ಮಾತ್ರ) ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ ಬಸ್ಸುಗಳೆಷ್ಟು?*

*ಆ) ಆ ಬಸ್ಸುಗಳು ಸಂಚರಿಸುತ್ತಿರುವ ಮಾರ್ಗ ಮತ್ತು ವೇಳೆಗಳೇನು (ವಿವರಗಳನ್ನೊದಗಿಸುವುದು)?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕನಕಪುರ ತಾಲ್ಲೂಕಿನಲ್ಲಿ 59 ಬಸ್ಸುಗಳನ್ನು ಮತ್ತು ಚನ್ನಪಟ್ಟಣ ತಾಲ್ಲೂಕಿನ ವಿರುಪಾಕ್ಷಪುರ ಹೋಬಳಿಯಲ್ಲಿ 5 ಬಸ್ಸುಗಳನ್ನು ಕಾರ್ಯಾಚರಣೆಗೆ ಒಳಪಡಿಸಲಾಗುತ್ತಿದೆ.

ಆ) ಕನಕಪುರ ತಾಲ್ಲೂಕಿನಲ್ಲಿ ಕಾರ್ಯಚರಣೆಗೆ ಒಳಪಡಿಸಲಾಗುತ್ತಿರುವ ಬಸ್ಸುಗಳ ಮಾರ್ಗಗಳು ಮತ್ತು ವೇಳಾಪಟ್ಟಿ ವಿವರಗಳನ್ನು ಅನುಬಂಧ 'ಎ'ನಲ್ಲಿ ಒದಗಿಸಲಾಗಿದೆ ಮತ್ತು ಚನ್ನಪಟ್ಟಣ ತಾಲ್ಲೂಕಿನ ವಿರುಪಾಕ್ಷಪುರ ಹೋಬಳಿಯಲ್ಲಿ ಕಾರ್ಯಾಚರಣೆಗೆ ಒಳಪಡಿಸಲಾಗುತ್ತಿರುವ ಮಾರ್ಗಗಳ ವಿವರಗಳನ್ನು ಅನುಬಂಧ 'ಬಿ'ನಲ್ಲಿ ಒದಗಿಸಲಾಗಿದೆ.

ANNEXURE -A

DETAILS OF BUS OPERATIONS IN KANAKAPURA TALUK

| Sl. No. | No. of Trips | Route From | to | Timings From | to |
|---|---|---|---|---|---|
| 1 | 2 | 3 | 4 | 5 | 6 |
| 1. | 10 | Kolliganahalli - | Ramanagara | 0600-0650 | |
| | | Ramanagara - | Kolliganahalli | 0655-0745 | |